ಅಲ್ಲಿ ಖಾಸಗಿ ಬಸ್ ನಿಲ್ದಾಣ ಮಾಡಿದರೆ, ಸೂಕ್ತವೆಂದು ತಮ್ಮ ಮೂಲಕ ಸಚಿವರ ಗಮನಕ್ಕೆ ತರುತ್ತೇವೆ. ಇವತ್ತು ಈ ಜಾಗದಲ್ಲಿ ಜನರು ಓಡಾಡಲು ಬಹಳ ಕಷ್ಟಪಡುತ್ತಿದ್ದಾರೆ. ಮಹಾರಾಣಿ ಕಾಲೇಜಿನಿಂದ ರಾಜಾಜಿನಗರಕ್ಕೆ ಹೋಗುವಂಥ ಫ್ಲೈಓವರ್ ವ್ಯವಸ್ಥೆ ಮಾಡಬೇಕೆಂದು ಉದ್ದೇಶವಿದೆ. ಆದ್ದರಿಂದ ಮಿನರ್ವ ಮಿಲ್ ಮತ್ತು ಬಿನ್ನಿ ಮಿಲ್ ಸ್ಥಳವನ್ನು ಕೈಬಿಡಬೇಕು. ಹೊಸ ಸ್ಥಳವನ್ನು ಆಯ್ಕೆ ಮಾಡಬೇಕೆಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಅನಂತ್‌ನಾಗ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ಅರ್ಥಮಾಡಿಕೊಂಡಿದ್ದೇನೆ. ಈ ದೃಷ್ಟಿಯಿಂದ ಮತ್ತೊಮ್ಮೆ ಸಮಗ್ರವಾಗಿ ಇದರ ಬಗ್ಗೆ ಪುನರ್ಪರಿಶೀಲನೆ ಮಾಡಬೇಕಾಗುತ್ತದೆ. ದಾಖಲೆ ಇಲ್ಲದೆ ಹೈಕೋರ್ಟ್‌ನಲ್ಲಿ ಹೇಗೆ ತಡೆಯಾಜ್ಞೆ ಕೊಟ್ಟರು ಎಂಬ ಬಗ್ಗೆ ವಿಚಾರವನ್ನು ತಿಳಿದುಕೊಂಡು ಮಾನ್ಯ ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಗಮನದಲಿಟ್ಟುಕೊಂಡು ಪುನಃ ಇದರ ಬಗ್ಗೆ ಪುನರ್ಪರಿಶೀಲನೆ ಮಾಡಿ ಸೂಕ್ತ ಕ್ರಮವನ್ನು ಸರ್ಕಾರ ತೆಗೆದುಕೊಳ್ಳುತ್ತದೆಂದು ಹೇಳಬಯಸುತ್ತೇನೆ.

ಶ್ರೀ ಬಿ.ಮುನಿಯಪ್ಪ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ದಾಖಲೆಗಳು ಇಲ್ಲದೆ ಕೋರ್ಟ್ ಯಾವ ರೀತಿ ತಡೆಯಾಜ್ಞೆ ಕೊಟ್ಟಿದೆಯೆಂದು ಕೇಳುತ್ತಿದ್ದಾರೆ. ನಾನು ತಾಳ್ಮೆಯಿಂದ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬೆಂಗಳೂರು ಮಹಾ ನಗರಪಾಲಿಕೆಯೋ, ಅಥವಾ ರಾಜ್ಯದ ಯಾವುದಾದರೊಂದು ಭಾಗದಲ್ಲಿ ಅಧಿಕಾರಿಗಳು ಖಾತೆಯನ್ನು ಮಾಡಿಕೊಡುತ್ತಾರೆ. ಬೇಕಾದರೆ ವಿಧಾನಸೌಧಕ್ಕೆ ಸಹ ಖಾತೆಯನ್ನು ಮಾಡಿಕೊಡುತ್ತಾರೆ. ಅಂಥ ಪ್ರಸಂಗಗಳಾಗುತ್ತಿರುವುದನ್ನು ನಾವ್ಯಾರು ಮರೆಯಬಾರದು. ನಾವು ಮುಂದೆ ವಿಧಾನಸೌಧದೊಳಗೆ ಬರುವಾಗ ಅದು ಬೇರೆಯವರ ಸ್ವತ್ತು ಎಂದು ತಿಳಿದುಕೊಳ್ಳತಕ್ಕ ಪದ್ದತಿ ಬಂದೀತು. ಅದೇ ರೀತಿ ಬೆಂಗಳೂರಿನಲ್ಲಿ ಹಲವಾರು ಜನರ ಸ್ವತ್ತನ್ನು ಬೇರೆಯವರಿಗೆ ಖಾತೆ ಮಾಡಿಕೊಟ್ಟಿರುವ ಪ್ರಸಂಗಗಳು ಬೆಂಗಳೂರು ಮಹಾನಗರ ಪಾಲಿಕೆಯಲ್ಲಾಗುತ್ತಿದೆ ಎಂದು ತಾಳ್ಮೆಯಿಂದ ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಅನಂತ್‌ನಾಗ್:- ಮಾನ್ಯ ಸದಸ್ಯರ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿ ಆ ರೀತಿ ನಡೆಯದಂತೆ ಜವಾಬ್ದಾರಿವಹಿಸುವುದಾಗಿ ಭರವಸೆ ನೀಡುತ್ತೇನೆ.

ತಡೆಯಿಡಿಯಲಾದ ಪ್ರಶ್ನೆಗಳು

ವಿಷಯ:- ಭದ್ರಾ ಮೇಲ್ದಂಡೆ ಯೋಜನೆಯ ಸರ್ವೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 748

ಶ್ರೀ ಹೆಚ್.ಶಿವಪ್ಪ (ಹರಿಹರ):- ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ

ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾ ಮೇಲ್ದಂಡೆ ಯೋಜನೆಯು ಸರ್ಕಾರದ ಕ್ರಿಯಾಶೀಲ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಈ ಯೋಜನೆಯ ಶಕ್ಯತೆ ಅಥವಾ ಅವಶ್ಯಕತೆಯ ಬಗ್ಗೆ ಸರ್ವೆ ನಡೆಸಲಾಗುತ್ತಿದೆಯೇ?

ಇ) ಈ ಬಗ್ಗೆ ತಜ್ಞರ ಜೊತೆಯಲ್ಲಿ ಸಮಾಲೋಚಿಸಲಾಗಿದೆಯೇ, ಹಾಗಿದ್ದಲ್ಲಿ ಅವರ ಅಭಿಪ್ರಾಯವೇನು?

ಶ್ರೀ ಕೆ.ಎನ್.ನಾಗೇಗೌಡ (ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು):-

ಅ) ಹೌದು.

ಆ) ತನಿಖೆ ಅನ್ವೇಷಣಾ ಹಂತದಲ್ಲಿದೆ.

ಇ) (ಆ) ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಭದ್ರಾ ಮೇಲ್ದಂಡೆ ಯೋಜನೆಯು ಸಕಾರರದ ಕ್ರಿಯಾಶೀಲ ಪರಿಶೀಲನೆಯಲ್ಲಿದೆಯೇ? ಎಂಬ ನನ್ನ ಪ್ರಶ್ನೆಗೆ 'ಹೌದು' ಎಂದು ಮಾನ್ಯ ಸಚಿವರು ಉತ್ತರಿಸಿದ್ದಾರೆ. ಹಾಗಿದ್ದಲ್ಲಿ ಈ ಯೋಜನೆಯ ಅವಶ್ಯಕತೆ ಬಗ್ಗೆ ಸರ್ವೆ ನಡೆಸಲಾಗುತ್ತಿದೆಯೇ? ಎಂಬ ಪ್ರಶ್ನೆಗೆ 'ತನಿಖೆ ಅನ್ವೇಷಣಾ ಹಂತದಲ್ಲಿದೆ' ಎಂದು ಮಾನ್ಯ ಸಚಿವರು ಉತ್ತರಿಸಿದ್ದಾರೆ. ಈ ಬಗ್ಗೆ ತಜ್ಞರ ಜೊತೆಯಲ್ಲಿ ಸಮಾಲೋಚನೆ ಮಾಡಲಾಗಿದೆಯೇ? ಹಾಗಿದ್ದಲ್ಲಿ ಅವರ ಅಭಿಪ್ರಾಯ ಏನು? ಎಂಬ ಪ್ರಶ್ನೆಗೆ 'ಹಿಂದಿನ ಪ್ರಶ್ನೆಯ ಉತ್ತರದಿಂದ ಇದು ಉದ್ಭವಿಸುವುದಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳುತ್ತಾರೆ. ಈಗ ಮೊನ್ನೆ ಮಾನ್ಯ ಮಂತ್ರಿಗಳು ಇದರ ಬಗ್ಗೆ ಒಂದು ಮೀಟಿಂಗ್ ಅನ್ನು ಕರೆದಿದ್ದರು. ಅದರಲ್ಲಿ ನಮಗೆ ಬ್ಯಾಕ್‌ಗ್ರೌಂಡ್ ಪೇಪರ್ ಕೊಟ್ಟಿದ್ದಾರೆ, ಅದರಲ್ಲಿ ಈಗಾಗಲೇ ಈ ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ ಎಂದು ಹೇಳಿದ್ದಾರೆ. The rough estimated cost of the scheme at SR rate of 1995-96 is about Rs.1,641 Crores. The cost per acre works out to amout Rs.42,000 ಎಂದು ಹೇಳಿದ್ದಾರೆ. ಇನ್ನೂ ಬೇರೆ ಬೇರೆ ಕೆಲವು ಸಲಹೆಗಳನ್ನೂ ಕೂಡ ಕೊಟ್ಟಿದ್ದಾರೆ. ಮತ್ತು ಈಗ ಹೇಳುತ್ತಾರೆ, ಇನ್ನೂ ಇನ್‌ವೆಸ್ಟಿಗೇಷನ್‌ನಲ್ಲಿ ಇದೆ ಎಂದು ಹೇಳುತ್ತಾರೆ.

ಅಧ್ಯಕ್ಷರು:- ಒಂದು ನಿಮಿಷ, ತಾವು ದಯಮಾಡಿ ಯೀಲ್ಡ್ ಆಗಿ. ಮಾನ್ಯ ನಾಗೇಗೌಡರೇ, ಈ ವಿಚಾರದಲ್ಲಿ ನೀವು ಈಗ ಉತ್ತರ ಸ್ಟಾರ್ಟ್ ಮಾಡಿದರೆ ಸ್ವಲ್ಪ ಕಾಂಟ್ರವರ್ಸಿ ಆಗುತ್ತದೆ, ಚಿಕ್ಕಮಗಳೂರು ಜಿಲ್ಲೆಯ ಶಾಸಕರು, ಚಿಕ್ಕಮಗಳೂರು ಪ್ರಾಪರ್ ಶಾಸಕರು, ಮಾನ್ಯ ಜಯಚಂದ್ರರವರು, ಮಾನ್ಯ ಅರಗ ಜ್ಞಾನೇಂದ್ರರವರು

ಎಲ್ಲರೂ ನನ್ನ ಕಛೇರಿಯಲ್ಲಿ ಭೇಟಿ ಮಾಡಿ ತಾವು ಇದರ ಬಗ್ಗೆ ಚರ್ಚೆ ಮಾಡಬೇಕೆಂದು ಕೋರಿದ್ದಾರೆ. ನಾನು ಸಪ್ಲಿಮೆಂಟರೀಸ್ ಕರ್ಟೈಲ್ ಮಾಡುತ್ತಾ ಹೋಗುವುದು, ಅವರು ಪಾಪ ಕೈ ಎತ್ತುವುದು ಚೆನ್ನಾಗಿರುವುದಿಲ್ಲ. I wish we take up this matter for half an hour discussion.

SRI K.N.NAGEGOWDA:- Meanwhile, I would like to submit two points. Sir, there is no controversy at present. 22ನೇ ತಾರೀಖು ಲಾಸ್ಟ್ ಮಂತ್, ಈ ತಿಂಗಳು 8ನೇ ತಾರೀಖು, ಶಿವಮೊಗ್ಗ, ಚಿತ್ರದುರ್ಗ, ತುಮಕೂರು ಮತ್ತು ಚಿಕ್ಕಮಗಳೂರು, ಹೀಗೆ ನಾಲ್ಕು ಭಾಗದ ಜಿಲ್ಲೆಗಳ ಶಾಸಕರುಗಳನ್ನು, ಸಂಸತ್ ಸದಸ್ಯರುಗಳನ್ನು ಮತ್ತು ಮಂತ್ರಿಗಳನ್ನು ಕರೆಸಿ, ಐದು ವಿಚಾರಗಳಲ್ಲಿ ನಾವು ಹೊಂದಾಣಿಕೆ ಮಾಡಿಕೊಂಡು, ಇರತಕ್ಕಂತಹ ಆ ಜಮೀನುಗಳು, ಒಂದೂ ಎಕರೆ ಮುಳುಗಡೆ ಆಗುವುದಿಲ್ಲ. ಮುಳುಗಡೆ ಆಗದೇ ಇರುವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ, ತಾವು ಹೇಳಿದಂತೆ ಅದು ಮೊದಲು ಕಾಂಟ್ರವರ್ಸಿ ಆಗಿತ್ತು, ಅದರೆ ಈಗ ಆ ಕಾಂಟ್ರವರ್ಸಿ ಮುಗಿದು ಹೋಗಿದೆ. ಪ್ರಾಜೆಕ್ಟ್ ಅನ್ನು ಈಗ ಸರ್ವೆ ಮಾಡುತ್ತಿದ್ದೇವೆ. ಮಾನ್ಯ ನಿಜಲಿಂಗಪ್ಪನವರು ಇದು ಆಗಲೇ ಬೇಕು ಎನ್ನುವ ಒತ್ತಾಯವನ್ನೂ ಮಾಡಿದ್ದರು. ಅದನ್ನು ಭದ್ರಾ ಮೇಲ್ದಂಡೆ ಎನ್ನುವುದಕ್ಕೆ ಬದಲಾಗಿ ತುಂಗಾ ಡೈವರ್ಷನ್ ಸ್ಕೀಮ್ ಎಂದು ಮಾಡಲಾಗಿದೆ. We have asked for the survey and estimate. The project is in progress. ಚಿಕ್ಕಮಗಳೂರಿನಲ್ಲಿ ಒಂದು ಎಕರೆಯೂ ನೀರನಲ್ಲಿ ಮುಳುಗಡೆ ಆಗುವುದಿಲ್ಲ, ಅರಣ್ಯ ಮುಳುಗಡೆ ಆಗುವುದಿಲ್ಲ as specified to you, we are lifting water from Upper Thunga to Bhadra. ಭದ್ರಾ ಅಚ್ಚುಕಟ್ಟಿನಲ್ಲೂ ಸಹ ಒಂದು ಎರಕರೆಗೂ ಸಹ ನೀರಿಗೆ ತೊಂದರೆಯಾಗದ ರೀತಿ ನಾವು 5 ವಿಚಾರಗಳನ್ನು ಎಂ.ಎಲ್.ಎಗಳೊಂದಿಗೆ ಚರ್ಚಿಸಿ ನಿರ್ಣಯಕ್ಕೆ ಬಂದಿದ್ದೇವೆ. ಅಪ್ಪರ್ ತುಂಗಾ ಡೈವರ್ಷನ್ ಸ್ಕೀಮ್ ಎಂದು ಹೇಳಿ ಈ ಸ್ಕೀಮ್ ಅನ್ನು ಸರ್ವೆ ಮಾಡುವುದಕ್ಕೆ ಕೊಟ್ಟಿದ್ದೇವೆ, ಬಹುಶಃ ಎಲ್ಲಾ ಸದಸ್ಯರೂ ಇದಕ್ಕೆ ಒಪ್ಪಿಕೊಳ್ಳುತ್ತಾರೆಂದು ತಮ್ಮ ಮುಖಾಂತರ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಆರ್.ಸಗೀರ್ ಅಹಮದ್:- ಮಾನ್ಯ ಅಧ್ಯಕ್ಷರೇ, ತಾವು ಈ ವಿಷಯದ ಬಗ್ಗೆ ಅರ್ಧ ಗಂಟೆ ಕಾಲಾವಧಿಯ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ ಎಂದು ಹೇಳಿದ್ದುದು ಕೇಳಿ ನನಗಂತೂ ಬಹಳ ಸಂತೋಷವಾಗಿದೆ.

ಶ್ರೀ ಹೆಚ್.ಶಿವಪ್ಪ:- ಮಾನ್ಯ ಮಂತ್ರಿಗಳು ಒಂದು ಹಂತದಲ್ಲಿ ಇದು ಇನ್‌ವೆಸ್ಟಿಗೇಷನ್‌ನಲ್ಲಿ ಇದೆ ಎಂದು ಹೇಳುತ್ತಾರೆ. ಸಂಯುಕ್ತ ಕರ್ನಾಟಕದ ದಿನಾಂಕ 16.7.96ರ ಪತ್ರಿಕೆಯಲ್ಲಿ ಏನು ಬಂದಿದೆ ಅಂದರೆ, ಚಿತ್ರದುರ್ಗದ ಲೋಕಸಭಾ ಸದಸ್ಯರಾದ ಕೋದಂಡರಾಮಯ್ಯನವರು ಮೇಲ್ದಂಡೆ ಯೋಜನೆಗೆ 1030 ಕೋಟಿ

ರೂ.ಗಳು ಬಿಡುಗಡೆ ಆಗಿದೆ ಎಂದು ಹೇಳಿದ್ದಾರೆ ಎಂದು ಬಂದಿದೆ. ಹೀಗೆ ಈ ಯೋಜನೆ ಬಗ್ಗೆ ಕಾಂಟ್ರವರ್ಸಿ ಇದೆ. ಇದರಲ್ಲಿ ಯಾವುದು ನಿಜ? ಯಾವುದು ಸತ್ಯ? ತಜ್ಞರ ಅಭಿಪ್ರಾಯವನ್ನು ಈ ದಿಸೆಯಲ್ಲಿ ತೆಗೆದುಕೊಂಡಿದ್ದೀರೋ? ಬಚಾವತ್ ಅವಾರ್ಡ್‌ನಲ್ಲಿ ಎಷ್ಟು ನಮಗೆ ಬರಬೇಕಾಗಿತ್ತು? ಎಷ್ಟು ನೀರು ಅವೈಲಬಿಲಿಟಿ ಇದೆ? ಟೈಲ್ ಎಂಡರ್ಸ್ ಬಗ್ಗೆ ನೀವೇನಾದರೂ ಯೋಚನೆ ಮಾಡಿದ್ದೀರೊ? ತಜ್ಞರ ಸಲಹೆ ಪಡೆದಿದ್ದೀರೋ? ಇದರ ಬಗ್ಗೆ ನಮಗೆ ಮಾಹಿತಿ ಇಲ್ಲ. ಅದರ ಬಗ್ಗೆ ತಾವು ಮೊನ್ನೆ ಕರೆದ ಮೀಟಿಂಗ್‌ನಲ್ಲಿ ಎಸ್ಟಿಮೇಟೆಡ್ ಕಾಸ್ಟ್ 1641 ಕೋಟಿ ರೂ.ಗಳೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇದರಲ್ಲಿ ಯಾವುದು ನಿಜ?

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಲೋಕಸಭಾ ಸದಸ್ಯರಿಗೆ ಯಾವುದೇ ಹೇಳಿಕೆ ನೀಡುವ ಹಕ್ಕು ಇದೆ. ನಾವು ಸರ್ಕಾರದ ವತಿಯಿಂದ ಈ ಯೋಜನೆಯ ಅಂದಾಜು ವೆಚ್ಚ ಇಂತಿಷ್ಟು ಎಂದು ಯಾವುದೇ ಸಂದರ್ಭದಲ್ಲೂ ಹೇಳಿಲ್ಲ. ತಾವು ಮೊದಲು ನೀಡಿದ ಹೇಳಿಕೆ ಬಗ್ಗೆ ಮಾನ್ಯ ಲೋಕಸಭಾ ಸದಸ್ಯರಾದ ಕೋದಂಡರಾಮಯ್ಯನವರು ಮತ್ತೊಂದು ಕ್ಲಾರಿಫಿಕೇಷನ್‌ನ್ನು ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿದ್ದಾರೆ. ನಾನು ಆ ರೀತಿ ಹೇಳಲಿಲ್ಲ ಇನ್ನೂ ಅದು ಪ್ರಗತಿಯಲ್ಲಿದೆ, ಸರ್ವೆ ಮಾಡುತ್ತಿದ್ದಾರೆ ಅವರೂ ಆ ಮೀಟಿಂಗ್‌ನಲ್ಲಿ ಆಟೆಂಡ್ ಆಗಿದ್ದರು ಎಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ನಾನು ಎರಡು ಪಾಯಿಂಟ್‌ಗಳ ಬಗ್ಗೆ ಅವರಿಗೆ ಕ್ಲಾರಿಫೈ ಮಾಡಿ ಬಿಡುತ್ತೇನೆ. 2 ಲಕ್ಷ ಎಕರೆಗಿಂತಲೂ ಮೇಲ್ಪಟ್ಟು ಭದ್ರಾ ಅಚ್ಚುಕಟ್ಟು ಏನಿದೆ, ಅಪ್‌ಟು ದಾವಣಗೆರೆ ಮತ್ತು ಹರಿಹರದವರೆಗೆ, ನೀರಿಗೆ ತೊಂದರೆಯಾಗುತ್ತದೆ ಎನ್ನತಕ್ಕಂಥ ಮಾತನ್ನು ಅವರು ಹೇಳುತ್ತಿದ್ದಾರೆ. ಭದ್ರಾದೊಳಗಿನ ಒಂದು ಟಿ.ಎಂ.ಸಿ. ನೀರನ್ನೂ ಉಪಯೋಗಿಸುವುದಿಲ್ಲ. ತುಂಗಾದೊಳಗೆ ಇರತಕ್ಕಂಥ ಅಚ್ಚುಕಟ್ಟುದಾರರು ಏನಿದ್ದಾರೆ, ಚಿಕ್ಕಮಗಳೂರಿನಲ್ಲಿ, ತೀರ್ಥಹಳ್ಳಿಯಲ್ಲಿ, ಅಲ್ಲಿ ಸಹ ಒಂದು ಎಕರೆ ಮುಳುಗಡೆ ಮಾಡುವುದಕ್ಕೆ ನಾವು ಬಿಡುವುದಿಲ್ಲ. 12 TMC of water which we require, we are going to lift it from Upper Thunga to Bhadra and from Bhadra we are giving a diversion to Chitradurga. ಇದನ್ನು ನಾನು ಕ್ಲಾರಿಫೈ ಮಾಡಿದ್ದೇನೆ. ಬೇಕಾದರೆ ಇದಕ್ಕೆ ಗಂಟೆ ಕಾಲಾವಧಿಯ ಚರ್ಚೆ ನಡೆಸಲು ಅವಕಾಶ ಮಾಡಿಕೊಡಿ. Still I have got all the points to convince them and I will convince thim.

ಅಧ್ಯಕ್ಷರು:- ಸಮಯದ ಅಭವವಿರುವುದರಿಂದ, ಸಾಕಷ್ಟು ಜನ ಶಾಸಕರುಗಳು ಈ ವಿಚಾರದಲ್ಲಿ ಮಾತನಾಡಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದರಿಂದ ಇದನ್ನು ಪ್ರತ್ಯೇಕವಾಗಿ, ನಮ್ಮ ಅನುಕೂಲ ನೋಡಿಕೊಂಡು, ಅರ್ಧ ಗಂಟೆ ಕಾಲಾವಧಿ ಚರ್ಚೆಯನ್ನು ನಾನು ತೆಗೆದುಕೊಳ್ಳುತ್ತೇನೆ. ಅದರಲ್ಲಿ ದಯಮಾಡಿ ತಾವೆಲ್ಲರೂ ಭಾಗವಹಿಸಿ.

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಈ ಯೋಜನೆಗೆ ಮೂಲತಃ ಕಾರಣರಾದ ಸನ್ಮಾನ್ಯ ನಿಜಲಿಂಗಪ್ಪನವರ ಹೆಸರನ್ನು ಇದಕ್ಕೆ ಇಡಲಿಕ್ಕೆ ಸರ್ಕಾರ ಏನಾದರೂ ತೀರ್ಮಾನ ಮಾಡಿದೆಯೇ?

ಶ್ರೀ ಕೆ.ಎನ್.ನಾಗೇಗೌಡ:- ಮಾನ್ಯ ಅಧ್ಯಕ್ಷರೇ, ಆ ಯೋಜನೆ ಮಾಡುವುದಕ್ಕೇ ಅವರು ಅನುಮಾನ ಪಡುತ್ತಿದ್ದಾರೆ. ಎಲ್ಲಿದೆ ನೀರು ಹೇಳಿ ಅಂತ ಹೇಳುತ್ತಾರೆ? ಎಲ್ಲಿ ಎಸ್ಟಿಮೇಟ್ ಇದೆ ಅಂತ ಹೇಳುತ್ತಾರೆ? ಯೋಜನೆಗೆ ಮಾನ್ಯ ನಿಜಲಿಂಗಪ್ಪನವರು ಹೆಸರು ಇಡುತ್ತೀರಾ? ಎಂದು ಕೇಳುತ್ತಿದ್ದಾರೆ. ಈ ಯೋಜನೆಗೆ ಮಾನ್ಯ ನಿಜಲಿಂಗಪ್ಪನವರ ಹೆಸರನ್ನು ಇಡಲೇಬೇಕೆಂಬುದು ನಮ್ಮ ಆಸೆ. ನಾವು ಆ ಹೆಸರು ಇಡುತ್ತೇವೆ. Kindly cooperate with us.

ಅಧ್ಯಕ್ಷರು:- ಅರ್ಧ ಗಂಟೆ ಕಾಲಾವಧಿಯಡಿಯಲ್ಲಿ ಇದನ್ನು ಚರ್ಚೆಗೆ ತೆಗೆದುಕೊಳ್ಳೋಣ. ಯೋಜನೆಗೆ ಯಾರ ಹೆಸರನ್ನಾದರೂ ಇಟ್ಟುಕೊಳ್ಳಲಿ. ಇನ್ನಾವುದಾದರೂ ಒಂದು ಯೋಜನೆಗೆ ಮಾನ್ಯ ಸದಸ್ಯರ ಹೆಸರನ್ನೂ ಇಟ್ಟುಬಿಡಿ. ಇಲ್ಲಿಗೆ ಪ್ರಶ್ನೋತ್ತರ ಮುಗಿಯಿತು.

2 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಬಾಯಿ ಮಾತಿನ ಮಾತಿನ ಮೂಲಕ ನೀಡಲಾದ ಉತ್ತರಗಳು.

ಶ್ರೀ ಜಿ.ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ 23ನೇ ಜುಲೈ 1996 13ನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 86 ಪ್ರಶ್ನೆಗಳ ಪೈಕಿ 70 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ವಿಷಯ:- ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳ ಸಂಖ್ಯೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 153 (963)

ಶ್ರೀ ಯು.ಬಿ.ಬಣಕಾರ್ (ಹಿರೇಕೋರ್):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿದ್ಯುತ್ ಉತ್ಪಾದನಾ ಕೇಂದ್ರಗಳು ಎಷ್ಟು? ಅವು ಯಾವುವು?

ಆ) 1993-94ನೇ ಸಾಲಿನಿಂದ ಪ್ರತಿ ವರ್ಷ ಅವುಗಳು ಉತ್ಪಾದನಾ ಸಾಮರ್ಥ್ಯದ ಗುರಿ ಎಷ್ಟು ಹಾಗೂ ಉತ್ಪಾದನೆ ಆದ ವಿದ್ಯುತ್ ಪ್ರಮಾಣ ಎಷ್ಟು?

ಶ್ರೀ ಶರಣ ಬಸಪ್ಪ ದಾರ್‌ಸನಪುರ್ (ಇಂಧನ ರಾಜ್ಯ ಸಚಿವರು):-

ಅ) ರಾಜ್ಯದಲ್ಲಿ ವಿದ್ಯುತ್ ನಿಗಮ ಹಾಗೂ ವಿದ್ಯುತ್ ಮಂಡಳಿಯ ವಿದ್ಯುದಾಗಾರಗಳು ಸೇರಿ ಒಟ್ಟಾರೆ 22 ವಿದ್ಯುತ್ ಉತ್ಪಾದನಾ ಕೇಂದ್ರಗಳಿವೆ. ಅವು ಯಾವುವೆಂದರೆ :